ಸಂಖ್ಯೆ:ಎಂಎಜಿ(1)ಸಿಆರ್:207/2021-22.

ಜಿಲ್ಲಾಧಿಕಾರಿಯವರ ಕಛೇರಿ,
ತುಮಕೂರು ಜಿಲ್ಲೆ,
ತುಮಕೂರು. ದಿನಾಂಕ:31.03.2022.

# ಪತ್ರಿಕಾ ಪ್ರಕಟಣೆ

ದಿನಾಂಕ:01.04.2022 ರಂದು ಪರಮಪೂಜ್ಯ ಡಾ॥ ಶ್ರೀಶ್ರೀ ಶಿವಕುಮಾರಸ್ವಾಮಿಗಳ 115ನೇ ಜಯಂತಿ ಹಾಗೂ ಗುರುವಂದನಾ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಕೇಂದ್ರದ ಗೃಹ ಸಚಿವರು, ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು, ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಇತರೆ ಗಣ್ಯಾತೀಣ್ಯರು ಆಗಮಿಸಲಿದ್ದು, ಈ ಹಿನ್ನಲೆಯಲ್ಲಿ ದಿನಾಂಕ:01.04.2022 ರಂದು ತುಮಕೂರು ನಗರದ ಪ್ರಮುಖ ರಸ್ತೆಗಳಲ್ಲಿ ವಾಹನಗಳ ಸಂಚಾರದಲ್ಲಿ ಮಾರ್ಗ ಬದಲಾವಣೆ ಮತ್ತು ಬಸ್‌ಗಳು ಹಾಗೂ ಇತರೆ ಭಾರಿ ವಾಹನಗಳ ನಿಲುಗಡೆ ಹಾಗೂ ಸಮಾರಂಭಕ್ಕೆ ಬರುವ ಲಘ ವಾಹನಗಳಿಗೆ ಸಂಬಂಧಿಸಿದಂತೆ ಈ ಕೆಳಕಾಣಿಸಿದಂತೆ ಮಾರ್ಗಗಳ ಬದಲಾವಣೆ ಮಾಡಿರುವುದಾಗಿ ಸಾರ್ವಜನಿಕರಿಗೆ ತಿಳಿಸಿದೆ.

01. ಎ.ಪಿ.ಎಂ.ಸಿ., ಸರ್ವೀಸ್ ರಸ್ತೆಯಿಂದ ಅರ್ಬನ್ ರೆಸಾರ್ಟ್, ಶ್ರೀನಗರ, ಬಂಡೆಪಾಳ್ಯ, ಶ್ರೀ ಸಿದ್ದಗಂಗಾ ಮಠಕ್ಕೆ ಹೋಗುವ ಸಾರ್ವಜನಿಕ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿರುತ್ತದೆ.
02. ತುಮಕೂರು ನಗರದೊಳಗೆ ಬೆಂಗಳೂರು ಕಡೆಯಿಂದ ಬರುವಂತಹ ಸಮಾರಂಭರಕ್ಕೆ ಸಂಬಂಧಿಸಿದ ಬಸ್‌ಗಳು ಮತ್ತು ಇತರೆ ವಾಹನಗಳು **ಕ್ಯಾತ್ಸಂದ್ರ ವೃತ್ತ-ಬಟವಾಡಿ ಜಂಕ್ಷನ್-ಬಟವಾಡಿ ಬ್ರಿಡ್ಜ್ ಕೆಳಭಾಗದಿಂದ ದೇವರಾಯಪಟ್ಟಣ ಕ್ರಾಸ್** ಮುಖಾಂತರ ಸಿದ್ದಗಂಗಾ ಮಠದ ರಾಗಿ ಹೊಲದ ಒಳಭಾಗದಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದು.
03. ತುಮಕೂರು ನಗರದೊಳಗೆ ಕುಣಿಗಲ್ ಮಾರ್ಗದಿಂದ ಸಮಾರಂಭಕ್ಕೆ ಬರುವಂತಹ ಬಸ್‌ಗಳು ಮತ್ತು ಇತರೆ ವಾಹನಗಳು **ಕುಣಿಗಲ್ ಜಂಕ್ಷನ್-ರಿಂಗ್ ರಸ್ತೆ ಮುಖಾಂತರ ರೋಟಿಘರ್ ಬಳಿ 80 ಅಡಿ ರಸ್ತೆ ಮುಖಾಂತರ-ಜಂಕ್ಷನ್-ಬಟವಾಡಿ ಬ್ರಿಡ್ಜ್ ಕೆಳಭಾಗದಿಂದ ದೇವರಾಯಪಟ್ಟಣ ಕ್ರಾಸ್** ಮುಖಾಂತರ ಸಿದ್ದಗಂಗಾ ಮಠದ ರಾಗಿ ಹೊಲದ ಒಳಭಾಗದಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದು.
04. ಶಿರಾ-ಮಧುಗಿರಿ ಕಡೆಯಿಂದ ಸಿದ್ದಗಂಗಾ ಮಠಕ್ಕೆ ಆಗಮಿಸುವ ಎಲ್ಲಾ ರೀತಿಯ ವಾಹನಗಳು **ಅಂತರಸನಹಳ್ಳಿಯಿಂದ ರಾಷ್ಟ್ರೀಯ ಹೆದ್ದಾರಿ 48 ರ ರಸ್ತೆಯ ಮುಖಾಂತರ ಭಾರತೀ ನಗರ ಬ್ರಿಡ್ಜ್ ಬಳಿ ಸರ್ವೀಸ್ ರಸ್ತೆಯಿಂದ ದೇವರಾಯಪಟ್ಟಣ ಸರ್ಕಲ್** ಮುಖಾಂತರ ಸಿದ್ದಗಂಗಾ ಮಠದ ರಾಗಿ ಹೊಲದ ಒಳಭಾಗದಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದು.
05. ಸಿದ್ದಗಂಗಾ ಮಠದ ಸಮಾರಂಭಕ್ಕೆ ಗುಬ್ಬಿ, ಚೇಳೂರು ಮಾರ್ಗದಿಂದ ಬರುವಂತಹ ಎಲ್ಲಾ ರೀತಿಯ ವಾಹನಗಳು **ಗುಬ್ಬಿ ಜಂಕ್ಷನ್-ಲಕ್ಕಪ್ಪ ವೃತ್ತ-ಬಿ.ಜಿ.ಎಸ್ ವೃತ್ತ-ಅಶೋಕ ರಸ್ತೆ-ಕೋಡಿ ವೃತ್ತ-ಅಮಾನಿಕೆರೆ ಕೋತಿ ತೋಪು ರಸ್ತೆ ಮುಖಾಂತರ ಹನುಮಂತಪುರ ಬ್ರಿಡ್ಜ್ ಬಳಿ ಬಂದು ರಾಷ್ಟ್ರೀಯ ಹೆದ್ದಾರಿ 48 ರ ರಸ್ತೆಯ ಮುಖಾಂತರ ಭಾರತೀ ನಗರ ಬ್ರಿಡ್ಜ್ ಬಳಿ ಸರ್ವೀಸ್ ರಸ್ತೆಯಿಂದ ದೇವರಾಯಪಟ್ಟಣ ಸರ್ಕಲ್** ಮುಖಾಂತರ ಸಿದ್ದಗಂಗಾ ಮಠದ ರಾಗಿ ಹೊಲದ ಒಳಭಾಗದಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದು.
06. ತುಮಕೂರು ನಗರದೊಳಗೆ ಬೆಂಗಳೂರು ಕಡೆಯಿಂದ ಬರುವಂಹತ ಸಮಾರಂಭಕ್ಕೆ ಸಂಬಂಧಿಸಿದ ಲಘು ವಾಹನಗಳು **ಕ್ಯಾತ್ಸಂದ್ರ ವೃತ್ತ-ಬಟವಾಡಿ ವೈ ಜಂಕ್ಷನ್-ಬಟವಾಡಿ ಬ್ರಿಡ್ಜ್ ಕೆಳಭಾಗದಿಂದ**

**ದೇವರಾಯಪಟ್ಟಣ ಕ್ರಾಸ್** ಮುಖಾಂತರ ಸಿದ್ದಗಂಗಾ ಮಠದ ರಾಗಿ ಹೊಲದ ಒಳಭಾಗದಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದು.

07. ತುಮಕೂರು ನಗರದ ಪ್ರಮುಖ ರಸ್ತೆಗಳಾದ ಬಿ.ಹೆಚ್.ರಸ್ತೆ, ರಾಷ್ಟ್ರೀಯ ಹೆದ್ದಾರಿ 48 ರ ರಸ್ತೆ, ರಿಂಗ್ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಯಾವುದೇ ಸಾರ್ವಜನಿಕ ವಾಹನಗಳನ್ನು ಸಮಾರಂಭದ ದಿನ ರಸ್ತೆಯಲ್ಲಿ ನಿಲುಗಡೆ ಮಾಡತಕ್ಕದ್ದಲ್ಲ.

08. ತುಮಕೂರು ಜಿಲ್ಲೆ ಮತ್ತು ಹೊರಜಿಲ್ಲೆ ಹಾಗೂ ಇತರೆ ಕಡೆಗಳಿಂದ ಶ್ರೀ ಸಿದ್ದಗಂಗಾ ಮಠದ ಸಮಾರಂಭಕ್ಕೆ ಬರುವ ಎಲ್ಲಾ ದರ್ಜೆಯ ವಾಹನಗಳನ್ನು ದೇವರಾಯಪಟ್ಟಣ ಸರ್ಕಲ್ ಮುಖಾಂತರ ಸಿದ್ದಗಂಗಾ ಮಠದ ಬ್ಯಾಕ್‌ಗೇಟ್ ಮುಖಾಂತರ ರಾಗಿ ಹೊಲದಲ್ಲಿ ನಿರ್ಮಿಸಿರುವ ಪಾರ್ಕಿಂಗ್ ಸ್ಥಳದಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದು.

09. ತುಮಕೂರು ನಗರದೊಳಗಡೆ ವಾಹನ/ಬಸ್‌ಗಳನ್ನು ನಿಲುಗಡೆ ಮಾಡುವವರು, ಜೂನಿಯರ್ ಕಾಲೇಜು ಮೈದಾನ ಮತ್ತು ಅಮಾನಿಕೆರೆ ಎದುರು ವಾಹನಗಳನ್ನು ನಿಲುಗಡೆ ಮಾಡುವುದು.

10. ಶ್ರೀ ಸಿದ್ದಗಂಗಾ ಮಠದ ಕಡೆಯಿಂದ ಸಮಾರಂಭ ಮುಗಿಸಿಕೊಂಡು ನಗರದೊಳಗೆ ಪ್ರವೇಶಿಸುವ ಎಲ್ಲಾ ದರ್ಜೆಯ ವಾಹನಗಳು ಸಿದ್ದಗಂಗಾಮಠದ ರಾಗಿಹೊಲ-ಮಾರನಾಯಕನಪಾಳ್ಯ-ಸಿದ್ದಗಂಗಾ ಮಠದ ಕ್ರಾಸ್ ಮುಖಾಂತರ ತುಮಕೂರು, ಬೆಂಗಳೂರು ಕಡೆಗೆ ಸಂಚರಿಸುವುದು.

ತುಮಕೂರು ನಗರದಲ್ಲಿ ಮಾನ್ಯ ಕೇಂದ್ರ ಗೃಹ ಮಂತ್ರಿಗಳ ಕಾರ್ಯಕ್ರಮ ನಿಮಿತ್ತ ಸಮಾರಂಭಕ್ಕೆ ಬರುವ ಎಲ್ಲಾ ವಾಹನಗಳ ಚಾಲಕರುಗಳು ಮತ್ತು ಸಾರ್ವಜನಿಕರು ಮೇಲ್ಕಾಣಿಸಿದ ತಾತ್ಕಾಲಿಕ ಮಾರ್ಗದ ಮೂಲಕ ಸಂಚಾರ ಮಾಡಲು ಹಾಗೂ ಸಂಚಾರಿ ನಿಯಮಗಳನ್ನು ಪಾಲಿಸಲು ಈ ಮೂಲಕ ಕೋರಲಾಗಿದೆ.